JULY 05, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಕಲಬುರಗಿ ಜಿಲ್ಲೆ, ಜೇವರ್ಗಿಯಿಂದ** ಚಿತ್ರದುರ್ಗ ಜಿಲ್ಲೆಯ, ಹಿರಿಯೂರಿನ ವರೆಗೆ, 490 ಕಿಲೋ ಮೀಟರ್ ಉದ್ದದ, ರಾಷ್ಟ್ರೀಯ ಹೆದ್ದಾರಿ, 150 ಎ ಅಭಿವೃದ್ಧಿ ಪಡಿಸಲು, ಪ್ರಸ್ತಾವ ಸಿದ್ಧ ಪಡಿಸಲಾಗುತ್ತಿದೆ; ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ಅಧೀನಕ್ಕೆ ಒಳಪಡಿಸುವ ಪ್ರಕ್ರಿಯೆ, ಅಂತಿಮ ಹಂತದಲ್ಲಿದೆ ಎಂದು, ರಾಯಚೂರು, ಯಾದಗಿರಿ ಲೋಕಸಭಾ ಕ್ಷೇತ್ರದ ಸಂಸದ, ಜಿ. ಕುಮಾರ ನಾಯಕ ತಿಳಿಸಿದ್ದಾರೆ. ಯಾದಗಿರಿ ಜಿಲ್ಲೆ, ಶಹಾಪುರದಲ್ಲಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕ ಭಾಗದ, ಸಂಪರ್ಕ ವ್ಯವಸ್ಥೆ ಮತ್ತ ್ಟ ಸುಧಾರಿಸಲಿದ್ದು, ಅಭಿವೃದ್ಧಿಗೆ ವೇಗ ಸಿಗಲಿದೆ ಎಂದರು.

<><><>

**ವಿ.ಬಿ. ಜಿ ರಾಮ್ ಜಿ ಯೋಜನೆ,** ಪರಿಣಾಮಕಾರಿ ಅನುಷ್ಟಾನಕ್ಕಾಗಿ, ಮೈಸೂರಿನ, ಅಬ್ದುಲ್ ನಜೀರ್‌ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತಿರಾಜ್ ಸಂಸ್ಥೆಯಲ್ಲಿ ತರಬೇತಿ ಪಡೆದ, ಆಚಾರ್ಯ ತರಬೇತುದಾರರಿಂದ, ಜಿಲ್ಲಾಡಳಿತದ ಎಲ್ಲ ವರ್ಗದ ಅಧಿಕಾರಿಗಳಿಗೆ, ತರಬೇತಿ ನೀಡಲಾಗಿದೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಯುಕೇಶಕುಮಾರ, ತಿಳಿಸಿದ್ದಾರೆ. ಜಲ ಸಂರಕ್ಷಣೆ, ಹಿತಮಿತ ಬಳಕೆ ಸಂಬಂಧಿ ಕಾಮಗಾರಿಗಳು, ಗುಣಮಟ್ಟದ ಗ್ರಾಮೀಣ ಮೂಲಸೌಕರ್ಯಗಳ ನಿರ್ಮಾಣ, ಸುಸ್ಥಿರ ಆದಾಯಕ್ಕಾಗಿ ಜೀವನೋಪಾಯ, ವಿಪತ್ತು ಸನ್ನದ್ಧ ಕಾಮಗಾರಿಗಳಿಗೆ, ವಿ.ಬಿ. ಜಿ ರಾಮ್ ಜಿ ಯೋಜನೆ ಅಡಿ, ಆದ್ಯತೆ ನೀಡಲಾಗಿದೆ ಎಂದರು.

<><><>

**ಅಣುವಿದ್ಯುತ್ ಉತ್ಪಾದನೆಗೆ ಅಗತ್ಯವಾಗಿರುವ** ಥೋರಿಯಂ ನಿಕ್ಷೇಪ, ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನಲ್ಲಿ ಪತ್ತೆಯಾಗಿದೆ. ಅದಿರು ಖನನದ ಹರಾಜು ಪ್ರಕ್ರಿಯೆ ಪ್ರಾಥಮಿಕ ಹಂತದಲ್ಲಿದೆ. ಭಾರತೀಯ ಭೂ ವೈಜ್ಞಾನಿಕ ಸಮೀಕ್ಷಾ ಸಂಸ್ಥೆ, ಅಧ್ಯಯನ ನಡೆಸಿ, ಗುಂಡ್ಲುಪೇಟೆ ತಾಲೂಕು, ಕೂತನೂರು ಹಾಗೂ ಗುಂಡ್ಲುಪೇಟೆ ಪಟ್ಟಣದ, ಹೊರ ವಲಯದಲ್ಲಿ ಅಪರೂಪದ ಖನಿಜ ಥೋರಿಯಂ ನಿಕ್ಷೇಪ ಮೊನೊಜೈಟ್ ಪತ್ತೆ ಮಾಡಲಾಗಿದೆ ಎಂದು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಿರಿಯ ವಿಜ್ಞಾನಿ ರಾಜೇಶ. .

<><><>

**ರಾಜೇಶ ಧ್ವನಿ– 32 ಸೆಕೆಂದುಗಳು**

<><><>

**ಮತದಾರರ ಪಟ್ಟಿಯ, ವಿಶೇ ಸಮಗ್ರ ಪರಿ ಕರಣೆ** ಪ್ರಯುಕ್ತ, ಧಾರವಾಡ ಜಿಲ್ಲಾಧಿಕಾರಿ ಆರ್. ಸ್ನೇಹಲ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯಸಭಾ ಸಂಸದ ಎಂ.ನಾಗರಾಜ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ಅವರ ಮನೆಗಳಿಗೆ ತೆರಳಿ, ಎನ್ಯೂಮರೇಶನ್ ಫಾರ್ಮ್ ವಿತರಿಸಿ, ಮಾಹಿತಿ ನೀಡಿದರು. ಶಾಸಕರಾದ ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಪ್ರದೀಪ ಶೆಟ್ಟರ, ಎಸ್.ವಿ. ಸಂಕನೂರ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತ ರುದ್ರೇಶ ಘಾಳಿ ಸೇರಿದಂತೆ, ಹಿರಿಯ ಅಧಿಕಾರಿಗಳು, ಉಪಸ್ಥಿತರಿದ್ದರು.

<><><>

**ಧಾರವಾಡದ ಸಿ.ಎಸ್. ಪಾಟೀಲ** ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ, ಮತದಾರರ ಪಟ್ಟಿ ಪರಿ ಕರಣೆ – 2026ರ ವಿಶೇ ಸಭೆಯಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಂಡಿದ್ದರು.

<><><>

**ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು** ಖಾತೆ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ರಾಮನಗರ ಜಿಲ್ಲೆ, ಬಿಡದಿ, ಕೇತಗಾನಹಳ್ಳಿಯ ತಮ್ಮ ತೋಟದ ಮನೆಯಲ್ಲಿ, ಬೂತ್ ಮಟ್ಟದ ಅಧಿಕಾರಿಗಳಿಗೆ ಎಸ್.ಐ.ಆರ್ ಸಮೀಕ್ಷೆಗೆ ಅಗತ್ಯವಿರುವ ತಮ್ಮ ಹಾಗೂ ಕುಟುಂಬದ ದಾಖಲೆ ಮತ್ತು ಮಾಹಿತಿ ಒದಗಿಸಿದರು.

<><><>

**ಕೊಪ್ಪಳ ಜಿಲ್ಲೆಯ, ತೊಗಲು ಗೊಂಬೆಯಾಟ** ಕಲಾವಿದೆ, ಪದ್ಮಶ್ರೀ ಭೀಮವ್ವ ಸಿಳ್ಳೆಕ್ಯಾತ ಅವರಿಗೆ, ಜಿಲ್ಲಾಧಿಕಾರಿ ಡಾಕ್ಟರ ಸುರೇಶ ಬಿ. ಇಟ್ನಾಳ್ ಮತದಾರರ ಪಟ್ಟಿ ಪರಿಷ್ಕರಣೆ ಅರ್ಜಿ ನಮೂನೆ ನೀಡುವ ಮೂಲಕ ಎಸ್.ಐ.ಆರ್ ಪ್ರಕ್ರಿಯೆಯಗೆ ಚಾಲನೆ ನೀಡಿದರು.

<><><>

**ಗದಗ ಜಿಲ್ಲೆ, ನರಗುಂದದಲ್ಲಿ ಆಯೋಜಿಸಿದ್ದ,** ಮತದಾರರ ಪಟ್ಟಿ ವಿಶೇ ಸಮಗ್ರ ಪರಿ ಕರಣೆ, ಜನ ಜಾಗೃತಿ ದ್ವಿಚಕ್ರ ವಾಹನ ಜಾಥಾಕ್ಕೆ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ ಚಿನಗುಂಡಿ, ಚಾಲನೆ ನೀಡಿದರು.

<><><>

**ಮಂಡ್ಯ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ,** ಮನೋಜಕುಮಾರ ಮೀನಾ ಹಾಗೂ ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ, ಮತದಾರರ ಪಟ್ಟಿ ವಿಶೇ ಸಮಗ್ರ ಪರಿ ಕರಣೆ ಪ್ರಕ್ರಿಯೆಯನ್ನು, ಜಿಲ್ಲೆಯ ವಿವಿಧೆಡೆ ಪರಿಶೀಲಿಸಿದರು.

<><><>

**ಶಿವಮೊಗ್ಗ ಜಿಲ್ಲೆ, ಉಸ್ತುವಾರಿ ಕಾರ್ಯದರ್ಶಿ,** ಬಿ.ಬಿ.ಕಾವೇರಿ, ಅಬ್ದುಲ್ ನಜೀರ್‌ಸಾಬ ಸಭಾಂಗಣದಲ್ಲಿ, ಮತದಾರರ ಪಟ್ಟಿಯ ವಿಶೇ ಸಮಗ್ರ ಪರಿ ಕರಣೆ, ಪ್ರಗತಿ ಪರಿಶೀಲಿಸಿದರು.

<><><>

**ತುಮಕೂರು ಜಿಲ್ಲೆ, ತಿಪಟೂರಿನಲ್ಲಿ,** ಎಸ್.ಐ.ಆರ್. ಕುರಿತು, ವಿಶೇ ಚೇತನರಿಂದ ತ್ರಿಚಕ್ರ ವಾಹನ ಜಾಥಾ ಜರುಗಿತು.

<><><>

**ರಾಯಚೂರು ಜಿಲ್ಲಾ ಪಂಚಾಯಿತಿ** ವ್ಯಾಪ್ತಿಯ, ಕಡಗಂದೊಡ್ಡಿ ಗ್ರಾಮದಲ್ಲಿ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆರಂಭಿಸಲಾದ ನೂತನ ಬಸ್ ಸೇವೆಯನ್ನು ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಉದ್ಘಾಟಿಸಿದರು.

<><><>

**ಮಳೆಗಾಲದ ಸಂದರ್ಭ ಗುಡ್ಡ ಜರಿತದಂತಹ** ಅಪಾಯವನ್ನು ತಪ್ಪಿಸುವ ಉದ್ದೇಶದಿಂದ, ಮುಂಜಾಗ್ರತಾ ಕ್ರಮವಾಗಿ, ಕಾರವಾರ ರಾಷ್ಟ್ರೀಯ ಹೆದ್ದಾರಿ–66, ಬಿಣಗಾದಿಂದ ಅರಗಾ ಗ್ರಾಮದ ವರೆಗೆ ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>